**ಓಎಸ್ ನಂಃ 123/2019 ಪಿ.ಡಬ್ಲ್ಯೂ- 1**

**ದಿನಾಂಕಃ 20.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ 1 ರಿಂದ 4 ನೇ ಪ್ರತಿವಾದಿಯ ಪರ ಶ್ರೀ ಆರ್.ಎಂ.ಆರ್. ವಕೀಲರಿಂದಃ</u>

ದಾವಾ ಸ.ನಂ. ಎಷ್ಟು ಎಂದರೆ ಸಾಕ್ಷಿ ಸ.ನಂ. 331 ಎನ್ನುತ್ತಾರೆ. ಸದರಿ ಸ.ನಂ. ಒಟ್ಟು ವಿಸ್ತೀರ್ಣ ಎಷ್ಟು ಎಂದರೆ 5 ಎಕರೆ 16 ಗುಂಟೆ ಎನ್ನುತ್ತಾರೆ. ಸದರಿ ಆಸ್ತಿ ಮೊದಲು ಯಾರಿಗೆ ಸೇರಿರುತ್ತದೆ ಎಂದರೆ ಚಿಕ್ಕ ಕದಿರಪ್ಪ. ಚಿಕ್ಕ ಕದಿರಪ್ಪ ಯಾರು ಎಂದರೆ ನನ್ನ ತಾತ. ಸದರಿ ಚಿಕ್ಕ ಕದಿರಪ್ಪ ನಿಮ್ಮ ತಾತ ಎಂದು ತೋರಿಸಲು ದಾಖಲೆ ಕೊಟ್ಟಿರುತ್ತೀರಾ ಎಂದರೆ ವಕೀಲರಿಗೆ ಕೊಟ್ಟಿರುತ್ತೇನೆ. ನಿಮ್ಮ ತಾತನಿಗೆ ಸದರಿ ಆಸ್ತಿ ಹೇಗೆ ಬಂತು ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ಚಕ್ಕುಬಂದಿ ಗೊತ್ತಾ ಎಂದರೆ ಗೊತ್ತಿಲ್ಲ. ಗುರುಮೂರ್ತೆಪ್ಪ ರವರಿಗೆ 1 ಎಕರೆ ಸೇರಿರುತ್ತದೆ ಎಂದರೆ ಅವರು ಬರೆದುಕೊಂಡಿರುತ್ತಾರೆ ಅದು ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 4 ಗೊತ್ತಾ ಎಂದರೆ ಗೊತ್ತು. ಸದರಿ 3 ನೇ ಪ್ರತಿವಾದಿ ತಾತ ಬೈಯಣ್ಣ ಎಂದರೆ ಹೌದು. ಸದರಿ ಬೈಯಣ್ಣ ರವರು ನಿಮ್ಮ ತಾತ ಚಿಕ್ಕ ಕದಿರಪ್ಪ ರವರಿಂದ ದಿಃ 16.08.1966 ನೇ ಇಸವಿಯಲ್ಲಿ ಕ್ರಯದ ಮೂಲಕ 2 ಎಕರೆ 5 ಗುಂಟೆ ಆಸ್ತಿಯನ್ನು ಸ.ನಂ. 331 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು ಎನ್ನುತ್ತಾರೆ. ಸದರಿ ಕ್ರಯದಂತೆ ಸದರಿ ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಬೈಯಣ್ಣ ರವರು 2 ಎಕರೆ 5 ಗುಂಟೆ ಪೈಕಿ 1 ಎಕರೆ ಜಮೀನನ್ನು ದಿಃ 31.08.1966 ರಲ್ಲಿ ವೆಂಕಟಮ್ಮ ಕೊಂ. ಮುನಿಶಾಮಿ ರವರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಸದರಿ

ಬೈಯಣ್ಣ ತೀರಿಕೊಂಡಿರುತ್ತಾರೆ ಅವರಿಗೆ **3** ಜನ ಮಕ್ಕಳು ಎಂದರೆ ಹೌದು. ಸದರಿ ಬೈಯಣ್ಣ **3** ಜನ ಮಕ್ಕಳು ಅವರು ಮುನೆಪ್ಪ ಸೊಣ್ಣಪ್ಪ ರೆಡ್ಡಿ, ರಾಮರೆಡ್ಡಿ ಮತ್ತು **2** ರಿಂದ **4** ನೇ ಪ್ರತಿವಾದಿಗಳು ಮುನೆಪ್ಪನ ಮಕ್ಕಳು ಎಂದರೆ ಹೌದು. ಅವರೆಲ್ಲರೂ ವಿಭಾಗ ಆಗಿ ಸದರಿ ದಾವಾ ಆಸ್ತಿಯನ್ನು ಮುನೆಪ್ಪ ರವರ ಭಾಗಕ್ಕೆ **1** ಎಕರೆ **5** ಗುಂಟೆ ಬಂದಿರುತ್ತದೆ ಎಂದರೆ ಅವರು ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಿಃ **02.07.1985** ರಲ್ಲಿ ವೆಂಕಟಮ್ಮ ಮುನಿಶಾಮಪ್ಪ ಮತ್ತು ಅವರು ಮೈನರ್ ಮಗ ಮಂಜುನಾಥ ರವರು **1** ಎಕರೆ ಆಸ್ತಿಯನ್ನು ಕೊಂಡುಕೊಂಡಿರುತ್ತಾರೆ ಎಂದರೆ ಮುನಿಶಾಮಿ ಎಂಬುವವರಿಗೆ ಮಕ್ಕಳಿಲ್ಲ ಎನ್ನುತ್ತಾರೆ. **2** ಎಕರೆ **5** ಗುಂಟೆ ಆಸ್ತಿ ಮುನೆಪ್ಪ ರವರ ಆಸ್ತಿ ಎಂದರೆ ಅವರು ಬರೆದುಕೊಂಡಿರುತ್ತಾರೆ ಎನ್ನುತ್ತಾರೆ. ಎಲ್ಲಾ ರೆವಿನ್ಯೂ ದಾಖಲೆಗಳು ಮುನೆಪ್ಪ ನ ಹೆಸರಿಗೆ ಇರುತ್ತದೆ ಎಂದರೆ ನನ್ನ ತಾತನ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ದಿಃ **13.02.2013** ರಲ್ಲಿ ಮುನೆಪ್ಪ ತೀರಿಕೊಂಡಿರುತ್ತಾರೆ ಎಂದರೆ ಹೌದು. ಸೀತಮ್ಮ ರವರು ಮುನೆಪ್ಪನ ಹೆಂಡತಿ ಎಂದರೆ ಹೌದು. **1** ರಿಂದ **4** ನೇ ಪ್ರತಿವಾದಿಗಳು **2** ಎಕರೆ **5** ಗುಂಟೆ ಆಸ್ತಿಯಲ್ಲಿ ಸ್ವಾದಿನಲ್ಲಿ ಇರುತ್ತಾರೆ ಎಂದರೆ ನಾವು ಇದ್ದೆವೆ ಎನ್ನುತ್ತಾರೆ. ಸದರಿ **2** ಎಕರೆ **5** ಗಂನಟೆ ಯಲ್ಲಿ ಸತ್ವಾದಿನಲ್ಲಿ ಇರುವುದಕ್ಕೆ ದಾಖಲಾತಿ ಕೊಟ್ಟಿರುತ್ತಿರಾ ಎಂದರೆ ಕೊಟ್ಟಿರುತ್ತೇನೆ. ಸದರಿ ಆಸ್ತಿಯಲ್ಲಿ ನೀವು ಯಾವುದೇ ಹಕ್ಕು ಸ್ವಾದಿನದಲ್ಲಿ ಇಲ್ಲ ಪ್ರತಿವಾದಿಗಳು ಇರುತ್ತಾರೆ ಎಂದರೆ ಸರಿಯಲ್ಲ. ನೀವು ಸ್ವಾದಿನಲ್ಲಿ ಇರುವುದಕ್ಕೆ ಯಾವ ದಾಖಲಾತಿ ಕೊಟ್ಟಿರುತ್ತೀರಿ ಎಂದರೆ ನಮ್ಮ ವಕೀಲರಿಗೆ ಕೊಟ್ಟಿರುತ್ತೆನೆ. ನೀವು ಮತ್ತು ಸದರಿ ಮುನೆಪ್ಪ ನಿಮ್ಮ ಹಾಗೂ ನಿಮ್ಮ ತಂಗಿ ನಲ್ಲಮ್ಮ ವಿರುದ್ಧ ಅಸಲು ದಾವಾ ಸಂ. **99/2000** ದಾವೆ ಇರುತ್ತದೆ ಎಂದರೆ ಹಾಕಿರುತ್ತಾರೆ. ಸದರಿ ದಾವೆ ಡಿಕ್ರಿ

ಆಗಿರುತ್ತದೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.